**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 48/2014</u>**

ದಿನಾಂಕಃ 16.12.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 4 (ಚಾ.ಸಾ.3)

| | | |
|---|---|---|
| ಹೆಸರು | ಃ | ರಾಜಪ್ಪ |
| ತಂದೆಯ ಹೆಸರು | ಃ | ಹೊನ್ನಪ್ಪ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಪ್ರ.ದ.ಸಹಾಯಕರು |
| ವಾಸ ಸ್ಥಳ | ಃ | ಹಾರೋಹಳ್ಳಿ |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ನಾನು 2010 ರಲ್ಲಿ ರಾಮನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿ.ದ.ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆ ಸಮಯದಲ್ಲಿ ನನ್ನ ಮೇಲಾಧಿಕಾರಿ ಪ್ರಾಂಶಪಾಲರಾದ ರೆಹಮಾನರವರು ಆಗಿದ್ದರು.

2. ತಾಃ 06.08.2010 ರಂದು ಡಿಡಿಪಿಐ ಕಚೇರಿಯಿಂದ ನಮ್ಮ ಪ್ರಾಂಶುಪಾಲರಿಗೆ ಫೋನ್ ಕರೆ ಬಂದಿದ್ದು, ಲೋಕಾಯುಕ್ತ ಪೊಲೀಸರಿಗೆ ತನಿಖೆಯಲ್ಲಿ ಸಹಕರಿಸಲು ನನ್ನನ್ನು ಕಳುಹಿಸುವಂತೆ ಹೇಳಿದ್ದರು. ಅದರಂತೆ ಮಧ್ಯಾಹ್ನ 12.45 ಗಂಟೆಗೆ ನಾನು ಲೋಕಾಯುಕ್ತ ಕಚೇರಿಗೆ ಹೋದೆನು. ಲೋಕಾಯುಕ್ತ ಕಚೇರಿಯಲ್ಲಿ ಇನ್ಸಪೆಕ್ಟರ್, ಉಪ ನೋಂದಣಾಧಿಕಾರಿ ಕಚೇರಿಯ -ಯೋಗೇಶರವರು ಇದ್ದರು. ಲೋಕಾಯುಕ್ತ ಕಚೇರಿಯಲ್ಲಿ ಪ್ರಕರಣದ ಪಿರ್ಯಾದಿ ಗುರುರಾಜು ಎನ್ನುವವರು ಸಹ ಇದ್ದರು. ಲೋಕಾಯುಕ್ತ ಅಧಿಕಾರಿ ನಮ್ಮ ಪರಸ್ಪರ ಪರಿಚಯ ಮಾಡಿಕೊಟ್ಟರು.

**3.** ಪಿರ್ಯಾದಿ ಕೊಟ್ಟಿದ್ದ ದೂರನ್ನು ಲೋಕಾಯುಕ್ತ ಅಧಿಕಾರಿ ನನಗೆ ತೋರಿಸಿದರು. ದೂರನ್ನು ನಾನು ನೋಡಿದೆ. ಪಿರ್ಯಾದಿಯ ತನ್ನ ತಂದೆಯ ಹೆಸರಿನಲ್ಲಿದ್ದ ಜಮೀನಿನ ಪೌತಿ ಖಾತೆ ಮಾಡುವಂತೆ ರಾಮನಗರದ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದು, ಕೈಲಾಂಚ ಹೋಬಳಿಯ ಲೆಕ್ಕಾಧಿಕಾರಿಗಳಾಗಿದ್ದ ಹರ್ಷ ಮತ್ತು ಮೋಹನ್ ಇವರುಗಳು ಸದರಿ ಪೌತಿ ಖಾತೆ ಮಾಡಿಕೊಡಲು ರೂ.**60,000/-** ಲಂಚ ಕೇಳಿದ್ದರು ಎಂದು ತಿಳಿದು ಬಂದಿತು. ಪಿರ್ಯಾದಿ ತನಗೆ ರೂ.**60** ಸಾವಿರ ಲಂಚ ಕೊಡಲು ಆಗುವುದಿಲ್ಲ, ರೂ.**25** ಸಾವಿರ ಲಂಚ ಕೊಡುತ್ತೇನೆ ಎಂದು ಹೇಳಿದ್ದರು ಎಂದು ಗೊತ್ತಾಯಿತು. ಈ ಬಗ್ಗೆ ಅಲ್ಲಿದ್ದ ಪಿರ್ಯಾದಿ - ಗುರುರಾಜು ಸಹ ನನಗೆ ಹೇಳಿದರು.

**4.** ತನಿಖಾಧಿಕಾರಿಗಳು ಪಿರ್ಯಾದಿಗೆ ಲಂಚವಾಗಿ ಕೊಡಲು ತಂದಿದ್ದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದರು. ಅದರಂತೆ ಪಿರ್ಯಾದಿ ರೂ.**1000** ಮುಖಬೆಲೆಯ **21** ನೋಟುಗಳನ್ನು ಮತ್ತು ರೂ.**500** ಮುಖಬೆಲೆಯ **8** ನೋಟುಗಳನ್ನು ಹಾಜರುಪಡಿಸಿದರು. ಆ ನೋಟುಗಳನ್ನು ನೋಡಿದರೆ ಗುರುತಿಸಬಲ್ಲೆ. ಆ ನೋಟುಗಳನ್ನು ಈಗಾಗಲೇ ಎಂ.ಒ.**1** ಎಂದು ಗುರುತಿಸಲಾಗಿದೆ.

**(ಎಂ.ಒ.1 - ನೋಟುಗಳನ್ನು ಈ ಸಾಕ್ಷಿ ಗುರುತಿಸುವುದನ್ನು ತಾವು ವಿವಾದಿಸುವುದಿಲ್ಲವೆಂದು ಆರೋಪಿ ಪರ ಶ್ರೀ.ವಿಎಂ., ವಕೀಲರು ನುಡಿದಿರುತ್ತಾರೆ.)**

**5.** ಸದರಿ ನೋಟುಗಳಿಗೆ ಲೋಕಾಯುಕ್ತ ಪೊಲೀಸರು ಬಿಳಿ ಬಣ್ಣದ ಪುಡಿಯನ್ನು ಹಚ್ಚಿದರು ಹಾಗು ಸದರಿ ನೋಟುಗಳನ್ನು ಯೋಗೇಶ ಕೈಯಲ್ಲಿ ಕೊಟ್ಟರು. ಅದಕ್ಕೂ ಮೊದಲು ಸದರಿ ನೋಟುಗಳನ್ನು ನಾನು ಎಣಿಸಿದೆ ಹಾಗು ಅವುಗಳ ಕ್ರಮಸಂಖ್ಯೆಯನ್ನು ನಾನು ಹೇಳಿದಂತೆ ಯೋಗೇಶ ಒಂದು ಕಾಗದ ಮೇಲೆ ಬರೆದುಕೊಂಡರು. ಆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.**25** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಈಗ ನಿಪಿ.**25**(ಬಿ) ಎಂದು ಗುರುತಿಸಲಾಯಿತು.

**6.** ತನಿಖಾಧಿಕಾರಿಗಳ ನಿರ್ದೇಶನದ ಮೇರೆಗೆ ಪಿರ್ಯಾದಿ ಧರಿಸಿದ್ದ ಶರ್ಟಿನ ಎಡ ಜೇಬನ್ನು ಯಾವುದೇ ಕಾಗದ ಅಥವಾ ಹಣ ಇಲ್ಲದೇ ಇರುವ ಬಗ್ಗೆ

ನಾನು ಪರಿಶೀಲಿಸಿ, ಅಲ್ಲಿ ಯಾವುದೇ ವಸ್ತು ಇಲ್ಲದೇ ಇರುವುದನ್ನು ಖಾತರಿಪಡಿಸಿದೆನು. ನಂತರ ಯೋಗೇಶ ಎಂ.ಓ.1 ನೋಟುಗಳನ್ನು ತನಿಖಾಧಿಕಾರಿಗಳ ನಿರ್ದೇಶನ ಮೇರೆಗೆ ಪಿರ್ಯಾದಿಯ ಶರ್ಟ್‌ನ ಎಡಜೇಬಿನಲ್ಲಿ ಇರಿಸಿದರು.

**7.** ಎಂ.ಓ.1 ಹಣವನ್ನು ಮೇಲೆ ಹೇಳಿದ ಲೆಕ್ಕಾಧಿಕಾರಿಗಳು ಲಂಚಕ್ಕಾಗಿ ಒತ್ತಾಯ ಮಾಡಿದರೆ ಮಾತ್ರ ಕೊಡುವಂತೆ ತನಿಖಾಧಿಕಾರಿಗಳು ಪಿರ್ಯಾದಿಗೆ ಸೂಚನೆ ನೀಡಿದರು. ಒಂದು ವೇಳೆ ಸರ್ಕಾರಿ ಅಧಿಕಾರಿ ಲಂಚದ ಹಣವನ್ನು ಸ್ವೀಕರಿಸಿದರೆ ತನ್ನ ತಲೆಯನ್ನು ಸವರಿಕೊಂಡು ಸೂಚನೆ ನೀಡುವಂತೆಯೂ ತಿಳಿಸಿದರು.

**8.** ನಂತರ ಯೋಗೇಶರವರ ಕೈಯನ್ನು ದ್ರಾವಣದಲ್ಲಿ ತೊಳೆಸಿದರು. ತೊಳೆಸುವುದಕ್ಕೂ ಮೊದಲು ಅದು ಬಿಳಿ ಬಣ್ಣದ ದ್ರಾವಣವಾಗಿತ್ತು. ಕೈ ತೊಳೆಸಿದ ನಂತರ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಿದರು. ಆ ಬಗ್ಗೆ ನಾನು ಸಹಿ ಮಾಡಿರುತ್ತೇನೆ.

**9.** ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿದರು. ಆ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.10 ರಿಂದ ನಿಪಿ.13 ಎಂದು ಗುರುತಿಸಲಾಗಿದೆ.

**10.** ತನಿಖಾಧಿಕಾರಿಗಳು ಆರೋಪಿ - ಮೋಹನ್‌ಗೆ ಫೋನ್ ಮಾಡಿ ಆತ ಎಲ್ಲಿದ್ದಾರೆ ಎಂದು ತಿಳಿದುಕೊಳ್ಳಿ ಎಂದು ಪಿರ್ಯಾದಿ - ಗುರುರಾಜಗೆ ಹೇಳಿದರು. ಆ ರೀತಿ ಪಿರ್ಯಾದಿ ಫೋನ್ ಮಾಡಿದಾಗ ತಾನು ರಾಮನಗರದ ಶಾನ್ ಟಾಕೀಸ್ ಬಳಿ ಇರುವುದಾಗಿ ಮೋಹನ್ ಪಿರ್ಯಾದಿಗೆ ಹೇಳಿದರು ಎಂದು ಗೊತ್ತಾಯಿತು.

**11.** ಯೋಗೇಶರವರಿಗೆ ತನಿಖಾಧಿಕಾರಿಗಳು ನೀವು ಪಿರ್ಯಾದಿಯ ಜೊತೆ ಇರಿ ಎಂದು ಹಾಗು ನನಗೆ ನೀವು ಜೊತೆಯಲ್ಲಿ ಹಿಂದೆ ಇರಿ ಎಂದು ನನಗೆ ಹೇಳಿದರು. ಈ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಲೋಕಾಯುಕ್ತ ಕಚೇರಿಯಲ್ಲಿ ಒಂದು ವಿವರವಾದ ಪಂಚನಾಮೆ ಬರೆಯಲಾಯಿತು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

**12.** ನಂತರ ನಾನು, ತನಿಖಾಧಿಕಾರಿ, ಪಿರ್ಯಾದಿ, ಪಂಚ – **1** – ಯೋಗೇಶ ಮತ್ತು ಸಿಬ್ಬಂದಿಗಳು ಒಟ್ಟಾಗಿ ಮಧ್ಯಾಹ್ನ **2.20** ಗಂಟೆಗೆ ಲೋಕಾಯುಕ್ತ ಕಚೇರಿಯಿಂದ ಹೊರಟು ಮಧ್ಯಾಹ್ನ **2.30** ಕ್ಕೆ ರಾಮನಗರದ ಶಾನ್ ಥಿಯೇಟರ್ ಬಳಿ ತಲುಪಿದೆವು. ಯೋಗೇಶ ಹಾಗು ಪಿರ್ಯಾದಿಯನ್ನು ತನಿಖಾಧಿಕಾರಿಗಳು ಮೊದಲು ಸದರಿ ಥಿಯೇಟರ್‌ನ ಒಳಗೆ ಕಳುಹಿಸಿದರು. ನಾವು ಸುಮಾರು **50-60** ಅಡಿ ದೂರದಲ್ಲಿದ್ದೆವು.

**13.** ನಂತರ ಮಧ್ಯಾಹ್ನ **2.45** ರ ಹೊತ್ತಿಗೆ ಮೋಹನ್ ಥಿಯೇಟರನ ಒಳಗಿನಿಂದ ಥಿಯೇಟರ್ ಈಚೆಗೆ ಬಂದರು. **50-60** ಅಡಿ ದೂರದಲ್ಲಿ ನಿಂತಿದ್ದ ನಮಗೆ ಪಿರ್ಯಾದಿ - ಗುರುರಾಜು ರವರು ಮೋಹನ್‌ರವರಿಗೆ ಹಣವನ್ನು ಕೊಟ್ಟಿದ್ದು, ಹಾಗು ಮೋಹನ್ ಹಣವನ್ನು ಎಣಿಸಿ ಕೊಳ್ಳುತ್ತಿದ್ದು ಕಂಡಿತು. ನಂತರ ಮೋಹನ್ ಸದರಿ ಹಣವನ್ನು ತಮ್ಮ ಪ್ಯಾಂಟಿನ ಹಿಂಭಾಗದ ಜೇಬಿನಲ್ಲಿಟ್ಟುಕೊಂಡರು.

**14.** ನಂತರ ನಾನು, ಲೋಕಾಯುಕ್ತ ಪೊಲೀಸರು ಪಿರ್ಯಾದಿ ಮತ್ತು ಆರೋಪಿ - ಮೋಹನ್ ಇದ್ದ ಸ್ಥಳಕ್ಕೆ ಹೋದೆವು. ನಂತರ ತನಿಖಾಧಿಕಾರಿಗಳು ಪಿರ್ಯಾದಿಯನ್ನು ವಿಚಾರಿಸಿದಾಗ ಪಿರ್ಯಾದಿ - ಗುರುರಾಜು ತಾನು ಆರೋಪಿ - ಮೋಹನ್‌ಗೆ ಹಣ ಕೊಟ್ಟಿರುವುದಾಗಿ ಹೇಳಿ, ಮೋಹನ್‌ರವರನ್ನು ತೋರಿಸಿದರು. ತನಿಖಾಧಿಕಾರಿಗಳು ಯೋಗೇಶರವರನ್ನು ವಿಚಾರಿಸಿದಾಗ ಅವರೂ ಸಹ ಆರೋಪಿ - ಮೋಹನ್‌ಗೆ ಪಿರ್ಯಾದಿ ಹಣ ಕೊಟ್ಟ ವಿಚಾರವನ್ನು ತಿಳಿಸಿದರು.

**15.** ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ - ಮೋಹನ್‌ರವರನ್ನು ನೋಡಿ ಗುರುತಿಸಿರುತ್ತಾರೆ.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**